# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ 953-2014** **ಸಿ. ಡಬ್ಲುಃ 01**

**ಪಿ. ಡಬ್ಲುಃ 01**

| | |
|---|---|
| ಸಾಕ್ಷಿದಾರರ ಹೆಸರು<br>ತಂದೆಯ / ಗಂಡನ ಹೆಸರು<br>ವಯಸ್ಸು<br>ಕೆಲಸ<br>ವಾಸ | ರಾಜ<br>ಪಿಚೈಕಾರನ್<br>41 ವರ್ಷ<br>ಐ.ಎ.ಎಸ್ ಅಧಿಕಾರಿ<br>ಬೆಂಗಳೂರು. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 06-11-2024.** |

**ಮುಖ್ಯ ವಿಚಾರಣೆಃ  ಶ್ರೀ ಎಪಿಪಿ  ವಕೀಲರಿಂದಃ**

ನಾನು ಅಕ್ಟೋಬರ್ 2013 ರಿಂದ ಸೆಪ್ಟೆಂಬರ್ 2014 ರವರೆಗೆ ನಂಜನಗೂಡು ಉಪ-ವಿಭಾಗದಲ್ಲಿ ಸಹಾಯಕ ಪೊಲೀಸ್ ವರಿಷ್ಠಾಧಿಕಾರಿಯಾ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ.05-02-2014 ರಂದು ರಾತ್ರಿ 11.00 ಗಂಟೆ ಸಮಯದಲ್ಲಿ ದೂರವಾಣಿ ಮುಖೇನ ನಂಜನಗೂಡು ಪಟ್ಟಣದ ಆರ್.ಪಿ ರಸ್ತೆಯ 20 ನೇ ಕ್ರಾಸ್‌ನಲ್ಲಿರುವ ಶ್ರೀ ಶ್ರೀಕಂಠೇಶ್ವರ ವಸತಿಗೃಹ ಲಾಡ್ಜ್ ನಲ್ಲಿ ಅಕ್ರಮವಾಗಿ ವ್ಯಭಿಚಾರ ನಡೆಯುತ್ತಿದೆ ಎಂದು ಮಾಹಿತಿ ಬಂದ ಮೇರೆಗೆ ನಾನು ನನ್ನ ಇಲಾಖಾ ಜೀಪಿನಲ್ಲಿ ನಂಜನಗೂಡು ಪಟ್ಟಣ ಪೊಲೀಸ್ ಠಾಣೆಗೆ ಬಂದು ಪಂಚಾರಾದ

ಚಾಸಾ-15 ಮತ್ತು 16 ರವರನ್ನು ಬರಮಾಡಿಕೊಂಡು ದಾಳಿ ವಿಚಾರ ತಿಳಿಸಿ ಪಂಚರಾಗಲು ಕೋರಿಕೊಂಡಿದ್ದು ಅದಕ್ಕೆ ಅವರು ಒಪ್ಪಿದ ಮೇರೆಗೆ ಪಂಚರಾದ ಚಾಸಾ-15 ಮತ್ತು 16 ಮತ್ತು ನಮ್ಮ ಇಲಾಖಾ ಸಿಬ್ಬಂದಿಗಳಾದ ಚಾಸಾ-2 ರಿಂದ 13 ಮತ್ತು 18 ರವರನ್ನು ಕರೆದುಕೊಂಡು ಇಲಾಖಾ ವಾಹನಗಳಲ್ಲಿ ಶ್ರೀ ಶ್ರೀಕಂಠೇಶ್ವರ ವಸತಿಗೃಹ ಲಾಡ್ಜ್ ಗೆ ಹೋಗಿ ನಾನು ಮತ್ತು ಸಿಬ್ಬಂದಿಗಳ ಸಮೇತ ಪಂಚರ ಸಮಕ್ಷಮ ದಿ.06-02-2014 ರಂದು ಬೆಳಗಿನ ಜಾವ 00.10 ಗಂಟೆಗೆ ಹೋಗಿ ನೋಡಲಾಗಿ ಲಾಡ್ಜ್ ನ ಒಳಭಾಗ ಇದ್ದ ಮ್ಯಾನೇಜರ್ ಆದ ಆರೋಪಿ ನಟರಾಜು ನಾವು ಬರುವುದನ್ನು ನೋಡಿ ಓಡಿ ಹೋಗಿರುತ್ತಾನೆ. ನಂತರ ಅಲ್ಲೇ ರೂಂ ಬಾಯ್ ಆದ ರವಿಕುಮಾರ್ ಜೊತೆ ರೂಮುಗಳನ್ನು ಪರಿಶೀಲಿಸಲು ರೂಂ.ನಂ.108 ರ ಬಾಗಿಲನ್ನು ತೆಗೆಸಿ ಒಳ ಪ್ರವೇಶಿಸಿ ಪರಿಶೀಲಿಸಲಾಗಿ ಅದರಲ್ಲಿ ಒಬ್ಬ ಗಂಡು ಮತ್ತು ಹೆಂಗಸು ಇದ್ದು ಇವರುಗಳು ಅರೆಬಟ್ಟೆ ಅವಸ್ಥೆಯಲ್ಲಿ ಇದ್ದು ನಮ್ಮಗಳನ್ನು ನೋಡಿ ಗಾಭರಿ ಆಗಿದ್ದು ಇವರುಗಳು ಅಕ್ರಮವಾಗಿ ವ್ಯಭಿಚಾರದಲ್ಲಿ ತೊಡಗಿರುವುದು ಕಂಡಬಂದಿತು. ಅವರು ಹೆಸರು ಕೇಳಲಾಗಿ ಏಜಾಜ್ ಬಿನ್ ಸೈಯದ್ ಅಬು, 8ನೇ ಕ್ರಾಸ್, ಪಿ.ಟಿ ಕ್ವಾಟರ್ಸ್ ಉದಯಗಿರಿ ಎಂದು ತಿಳಿಸಿದ್ದು, ಆನತ ಜೊತೆ ಇದ್ದ ಹೆಂಗಸಿನ ಹೆಸರು ಕೇಳಲಾಗಿ ಗೀತಾ ಕೋಂ ರಾಜು, ಮಂಡ್ಯದ ಕೊಪ್ಪಲು ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು

ಎಂದು ತಿಳಿಸಿದಳು. ನಂತರ ರೂಂ.ನಂ.110 ಅನ್ನು ಪರಿಶೀಲಿಸಲಾಗಿ ಆ ರೂಮಿನಲ್ಲಿಯೂ ಸಹ ಒಬ್ಬ ಗಂಡು ಮತ್ತು ಹೆಂಗಸು ಸಹ ಅಕ್ರಮವಾಗಿ ವ್ಯಭಿಚಾರದಲ್ಲಿ ತೊಡಗಿರುವುದು ಕಂಡಬಂದಿತು. ಅವರು ಹೆಸರು ಕೇಳಲಾಗಿ ವಿನಯ್ ಕುಮಾರ್ ಬಿನ್ ಆರ್.ಜಿ.ಕುಮಾರಣ್ಣ, ಆಲನಹಳ್ಳಿ, ಮೈಸೂರು ಎಂದು ತಿಳಿಸಿದ್ದು, ಆನತ ಜೊತೆ ಇದ್ದ ಹೆಂಗಸಿನ ಹೆಸರು ಕೇಳಲಾಗಿ ಸುಮಾ ಬಿನ್ ರಾಜಣ್ಣ ಹಂಪಾಪುರ ಗ್ರಾಮ, ಅರಕಲಗೂಡು ತಾಲ್ಲೂಕು ಎಂದು ತಿಳಿಸಿದಳು. ನಂತರ ರೂಂ.ನಂ.111 ಅನ್ನು ಪರಿಶೀಲಿಸಲಾಗಿ ಆ ರೂಮಿನಲ್ಲಿಯೂ ಸಹ ಒಬ್ಬ ಗಂಡು ಮತ್ತು ಹೆಂಗಸು ಸಹ ಅಕ್ರಮವಾಗಿ ವ್ಯಭಿಚಾರದಲ್ಲಿ ತೊಡಗಿರುವುದು ಕಂಡಬಂದಿತು. ಅವರು ಹೆಸರು ಕೇಳಲಾಗಿ ಗಂಡಸಿನ ಹೆಸರು ಶರಣಪ್ಪ ಬಿನ್ ಗೋರಪ್ಪ, ಕುತ್ತೂರು ಗ್ರಾಮ, ವಿರಾಜಪೇಟೆ ತಾಲ್ಲೂಕು ಎಂದು ತಿಳಿಸಿದ್ದು, ಆನತ ಜೊತೆ ಇದ್ದ ಹೆಂಗಸಿನ ಹೆಸರು ಕೇಳಲಾಗಿ ಜಯಶೀಲಾ ಕೋಂ ಚುಂಚೇಗೌಡ, ಮಂಡ್ಯದ ಕೊಪ್ಪಲು ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು ಎಂದು ತಿಳಿಸಿದರು. ನಂತರ ರೂಂ.ನಂ.112 ಅನ್ನು ಪರಿಶೀಲಿಸಲಾಗಿ ಆ ರೂಮಿನಲ್ಲಿಯೂ ಸಹ ಒಬ್ಬ ಗಂಡು ಮತ್ತು ಹೆಂಗಸು ಸಹ ಅಕ್ರಮವಾಗಿ ವ್ಯಭಿಚಾರದಲ್ಲಿ ತೊಡಗಿರುವುದು ಕಂಡಬಂದಿತು. ಅವರು ಹೆಸರು ಕೇಳಲಾಗಿ ಗಂಡಸಿನ ಹೆಸರು ಡಿ.ಮೌಲಾನ ಬಿನ್ ಎ.ದಸ್ತಗಿರ್

ಕೃಷ್ಣರಾಜಪುರಂ, ಬೆಂಗಳೂರು ಎಂದು  ತಿಳಿಸಿದ್ದು, ಆನತ ಜೊತೆ ಇದ್ದ ಹೆಂಗಸಿನ ಹೆಸರು ಕೇಳಲಾಗಿ ಸರಸ್ವತಿ ಕೋಂ ಮಧು ಅಶೋಕಪುರಂ ಮೈಸೂರು ಎಂದು ತಿಳಿಸಿದರು. ನಂತರ ರೂಂ.ನಂ.113 ಅನ್ನು ಪರಿಶೀಲಿಸಲಾಗಿ ಆ ರೂಮಿನಲ್ಲಿ ಒಬ್ಬ ಹೆಂಗಸು ಮಾತ್ರ ಇದ್ದು ಆಕೆಯ ಹೆಸರು ಕೇಳಲಾಗಿ ಸೋನು ಉರುಫ್ ತನುಜಾ ಕೋಂ ರೇವಣ್ಣ, ಟಿ.ಕಾಟೂರು ಗ್ರಾಮ, ಮೈಸೂರು ತಾಲ್ಲೂಕು ಎಂದು ತಿಳಿಸಿದ್ದು, ಆಕೆಯನ್ನು ವಿಚಾರ ಮಾಡಲಾಗಿ ಆಕೆಯ ಜೊತೆ ಲಾಡ್ಜ್ ನ ಮ್ಯಾನೇಜರ್ ನಟರಾಜು ರವರು ವ್ಯಭಿಚಾರ ನಡೆಸುವುದಾಗಿ ತಿಳಿಸಿರುತ್ತಾರೆ ಎಂದು ತಿಳಿಸಿದರು. ನಂತರ ಘಟನಾ ಸ್ಥಳದಲ್ಲಿ ಪಂಚರ ಸಮಕ್ಷಮ ಬೆಳಗ್ಗೆ 0.10 ರಿಂದ 2.10 ರವರೆಗೆ ಮಹಜರ್ ಕ್ರಮ ಜರುಗಿಸಿರುತ್ತೇನೆ. ಸಾಕ್ಷಿಯು ಸ್ಥಳ ಮಹಜರ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಂತರ ಆರೋಪಿಗಳು ಮತ್ತು ನೊಂದ ಮಹಿಳೆಯನ್ನು ಪಟ್ಟಣ ಪೊಲೀಸ್ ಠಾಣೆಗೆ ಕರೆತಂದು ಆರೋಪಿಗಳ ವಿರುದ್ಧ ಠಾಣಾಧಿಕಾರಿಯವರು ದೂರು ಸಲ್ಲಿಸಿರುತ್ತೇನೆ.  ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಘಟನಾ ದಿನಾಂಕದಂದು ದಸ್ತಗಿರಿ ಮಾಡಿದ 1 ರಿಂದ 3 ನೇ ಆರೋಪಿತರು ನ್ಯಾಯಾಲಯದ ಮುಂದೆ ಇದ್ದು, ಸಾಕ್ಷಿಯು 1

ರಿಂದ 3 ನೇ ಆರೋಪಿತರುಗಳನ್ನು ನೋಡಿ ಗುರುತಿಸಿರುತ್ತಾರೆ. 4 ರಿಂದ 6 ನೇ ಆರೋಪಿತರು ನ್ಯಾಯಾಲಯದಲ್ಲಿ ಗೈರು ಹಾಜರಿದ್ದು, ಗುರುತಿಸುವಿಕೆಗೆ 4 ರಿಂದ 6 ನೇ ಆರೋಪಿತರ ಪರ ವಕೀಲರು ತಕರಾರು ಇರುವುದಿಲ್ಲ.

(ಪಾಟೀ ಸವಾಲಿಗೆ ಆರೋಪಿತರ ಪರ ವಕೀಲರುಗಳು ಸಮಯಾವಕಾಶವನ್ನು ಕೋರಿದ್ದು ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ವಿಡಿಯೋ ಕಾನ್ಫರೆನ್ಸ್ ಮುಖಾಂತರ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**